<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
ಶ್ರೀರಂಗಪಟ್ಟಣ.

ಸಿ.ಸಿ.ಃ 632/2021

ಪಿ. ಡಬ್ಲ್ಯುಃ 02
ಸಿ. ಡಬ್ಲ್ಯುಃ 01

ಸಾಕ್ಷಿದಾರರ ಹೆಸರು : ಅರ್ಚನಾ. ಎಂ.ವಿ.
ಪತಿಯ ಹೆಸರು : ಆನಂದ ಕುಮಾರ
ವಯಸ್ಸು : 34 ವರ್ಷ
ವೃತ್ತಿ : ಪೋಲೀಸ್ ಸಬ್ ಇನ್ಸಪೆಕ್ಟರ್, ಚೆಸ್ಕಾಂ, ಮಂಡ್ಯ
ವಾಸ : ಮಂಡ್ಯ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 06.11.2023
ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ದಿಃ 24.04.2020 ರಿಂದ ದಿಃ 15.06.2021 ವರೆಗೆ ಅರಕೆರೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 30.03.2021 ರಂದು ನಾನು ಅರಕೆರೆ ಠಾಣಾ ವ್ಯಾಪ್ತಿಯ ಗಸ್ತಿನಲ್ಲಿದ್ದಾಗ ಬಾತ್ಮಿದಾರರಿಂದ ಬಂದಂತಹ ಮಾಹಿತಿ ಏನೆಂದರೆ ಮಂಡ್ಯ ಕೊಪ್ಪಲು ಎಲ್ಲೆಯಲ್ಲಿರುವ ಆರೋಪಿಯ ಅಂಗಡಿ ಬಳಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಕೂಡಲೇ ರಾತ್ರಿ 09.10 ಸಮಯದಲ್ಲಿ ಠಾಣೆಗೆ ಬಂದು ಠಾಣಾ ಪ್ರಭಾಧಿಕಾರಿಯವರಿಗೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಆರೋಪಿಯನ್ನು ದಾಳಿ ಮಾಡುವ ಸಲುವಾಗಿ ಠಾಣಾ ಸಿಬ್ಬಂದಿಗಳಾದ ಹೆಚ್.ಸಿ.347 ಸಿಂಗ್ರಿನಾಯಕ ಹಾಗೂ ಪಿಸಿ.92 ಸಿದ್ದರಾಮನಾಯಕ ರವರನ್ನು ಹಾಗೂ ಪಂಚರನ್ನು ಕರೆದುಕೊಂಡು ದಾಳಿ ಮಾಡಲು ತೆರಳುತ್ತಿದ್ದು ಅಬಕಾರಿ ದಾಳಿಗೆ ಸಂಬಂಧಿಸಿದಂತೆ ಅಬಕಾರಿ ಕಾಯಿದೆ ಕಲಂ. 34 ರಡಿಯಲ್ಲಿ ಪ್ರಕರಣ ದಾಖಲಿಸುವಂತೆ ಠಾಣಾದಿಕಾರಿಯವರಿಗೆ ದೂರು ನೀಡಿ ಠಾಣೆಯಿಂದ ನಮ್ಮ ಇಲಾಖಾ ವಾಹನದಲ್ಲಿ ಸಿಬ್ಬಂದಿಗಳು ಹಾಗೂ ಪಂಚರನ್ನು ಕರೆದುಕೊಂಡು ಆರೋಪಿಯ ಅಂಗಡಿ ಬಳಿ ತೆರಳಿರುತ್ತೇನೆ.

ಆರೋಪಿಯ ಅಂಗಡಿ ಹತ್ತಿರ ಆತನನ್ನು ವಿಚಾರಣೆ ಮಾಡಲಾಗಿ ಆರೋಪಿ ತನ್ನ ಹೆಸರನ್ನು ಸಣ್ಣಬೋರ ಬಿನ್ ಶಿವಣ್ಣ ಎಂದು ತಿಳಿಸಿದನು. ಸದರಿ ವ್ಯಕ್ತಿಗೆ ಮದ್ಯ ಮಾರಾಟ ಮಾಡಲು ಯಾವುದಾದರೂ ಲೈಸನ್ಸ ಪಡೆದಿದ್ದೀರಾ ಎಂದು ಪ್ರಶ್ನಿಸಿದ್ದು ಆತ ಮದ್ಯ ಮಾರಾಟ ಮಾಡುವ ಸಲುವಾಗಿ ಪರವಾನಿಗೆ ಪಡೆಯದೇ ಇರುವುದನ್ನು ತಿಳಿಸಿದನು. ನಂತರ ಅಂಗಡಿಯ

ಪಕ್ಕದ ಅಂಗಳದಲ್ಲಿ ಇದಂತಹ ಬಿಳಿಯ ಬಟ್ಟೆಯ ಚೀಲವನ್ನು ಪಂಚರ ಸಮಕ್ಷಮ ಸಿಬ್ಬಂದಿಗಳ ಸಹಾಯದಿಂದ ತೆರೆದು ನೋಡಲಾಗಿ ಅದರಲ್ಲಿ 180 ಎಂ.ಎಲ್ ಅಳತೆಯ old admiral brandy ಯ 10 ಪೌಚ್ ಗಳು ಇದ್ದು ಅವುಗಳ ಬೆಲೆ ತಲಾ ರೂ.86/- ಗಳು ಆಗಿತ್ತು. 180 ಎಂ.ಎಲ್ ಅಳತೆಯ Bag piper ನ 5 ಪೌಚ್ ಗಳು ಇದ್ದು ಅವುಗಳ ಬೆಲೆ ತಲಾ ರೂ.106/- ಗಳು ಆಗಿತ್ತು. ಒಟ್ಟು ಪೌಚ್ ಗಳ ಬೆಲೆ ರೂ.1398/- ಆಗಿತ್ತು.

ಸಿಕ್ಕ ಪೌಚ್ ಗಳನ್ನು ಪರಿಶೀಲಿಸಿ ಪಂಚರ ಸಮಕ್ಷಮ ಪ್ರತಿ ಪೌಚ್ ಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಗೆ ಸುತ್ತಿ ಎ ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು. ನಂತರ ಆರೋಪಿ ಮತ್ತು ಸಿಕ್ಕ ಪೌಚ್ ಗಳನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ನಂತರ ವಾಪಸ್ಸು ಪೋಲೀಸ್ ಠಾಣೆಗೆ ಬಂದು ಠಾಣೆಯಲ್ಲಿದ್ದ ಪ್ರಭಾರಿಯವರಿಗೆ ರಾಸಾಯನಿಕ ಪರೀಕ್ಷೆಯ ಸಲುವಾಗಿ ಸಿಕ್ಕ ಸ್ವತ್ತುಗಳನ್ನು ರಾಸಾಯನಿಕ ಪ್ರಯೋಗಾಲಯಕ್ಕೆ ಕಳುಹಿಸಲು ಅವರ ವಶಕ್ಕೆ ನೀಡಿರುತ್ತೇನೆ. ಠಾಣಾಧಿಕಾರಿಯವರ ವಶಕ್ಕೆ ಆರೋಪಿಯನ್ನು ನೀಡಿರುತ್ತೇನೆ.

ಮಹಜರ್ ಕ್ರಮವನ್ನು ಕೃತ್ಯ ನಡೆದ ಸ್ಥಳದಲ್ಲಿ ಸಮಯ ರಾತ್ರಿ 09.50-10.50 ವರೆಗೆ ಇಲಾಖಾ ವಾಹನದ ಹೆಡ್ ಲೈಟ್ ಬೆಳಕಿನ ಸಹಾಯದಿಂದ ಹಾಗೂ ಹ್ಯಾಂಡ್ ಟಾರ್ಚ ಸಹಾಯದಿಂದ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತೇನೆ.

ಠಾಣಾಧಿಕಾರಿಯವರಿಗೆ ನಾನು ನೀಡಿದ ವರದಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಿರ್ಯಾದನ್ನು ಹಾಗೂ ಅದರಲ್ಲಿನ ಸಹಿ ನೋಡಿ ಗುರುತಿಸಿದ್ದು, ಪಿರ್ಯಾದನ್ನು ನಿಪಿ.1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1-ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ.2 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2-ಎ ಎಂದು ಗುರುತಿಸಲಾಯಿತು.

ದಾಳಿಯ ಸಮಯದಲ್ಲಿ ನಾವು ಹಿಡಿದಿದ್ದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮಹಜರ್ ಕಾಲದಲ್ಲಿ ನಾನು ನನ್ನ ವಶಕ್ಕೆ ಪಡೆದಿದ್ದ ಮು.ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಸದರಿ ಮದ್ಯದ ಪೌಚ್ ಗಳನ್ನು ಹಾಗೂ ಬಿಳಿಯ ಬಟ್ಟೆಯ ಬ್ಯಾಗ್ ಗಳನ್ನು ಈಗಾಗಲೇ ಮು.ಮಾಲು.1 ರಿಂದ 3 ಎಂದು ಗುರುತಿಸಲಾಗಿದೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಎ.ಪಿ.ಎನ್. ವಕೀಲರಿಂದ**

ದಿಃ 30.03.2021 ರಂದು ರಾತ್ರಿ 09.00 ಸಮಯದಲ್ಲಿ ನಾನು ಅರಕೆರೆ ಟೌನ್ ನಲ್ಲಿ ಗಸ್ತು ಕರ್ತವ್ಯದಲ್ಲಿದ್ದೇನು. ಕೃತ್ಯದ ಮಾಹಿತಿ ನನಗೆ ರಾತ್ರಿ 08.50 ಸಮಯಕ್ಕೆ ಬಂದಿರುತ್ತದೆ. ನಾನು ನಿಪಿ.1 ದೂರನ್ನು ಠಾಣಾಧಿಕಾರಿಯವರಿಗೆ ರಾತ್ರಿ 09.10 ಸಮಯದಲಿ ನೀಡಿದ್ದೇನೆ. ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಸ್ಥಳದಿಂದ ಪೋಲೀಸ್ ಠಾಣೆ ಸುಮಾರು 3-4 ಕಿ.ಮಿ ಅಂತರದಲ್ಲಿತ್ತು. ಪೋಲೀಸ್ ಠಾಣೆಯಿಂದ ಸದರಿ ಸ್ಥಳವನ್ನು ಸೇರಲು 5 ನಿಮಿಷಗಳ ಸಮಯ ಸಾಕು ಎಂದರೆ ಸರಿ.

ಠಾಣೆಯಿಂದ ನಮ್ಮ ಇಲಾಖಾ ಜೀಪ್ ನಲ್ಲಿ ಸಿಬ್ಬಂದಿಗಳಾದ ಸಿಂಗ್ರಿನಾಯಕ ಹಾಗೂ ಸಿದ್ದರಾಮನಾಯಕ ಅವರ ಜೊತೆ ಪಂಚರಾದ ಶ್ರೀಧರ್ ಬಿನ್ ಸಿದ್ದೇಗೌಡ ಹಾಗೂ ಸುರೇಶ್ ಬಿನ್ ಮಾದಯ್ಯ ಎನ್ನುವವರನ್ನು ಕರೆದುಕೊಂಡು ಹೋಗಿದ್ದೇನು. ಸದರಿ ವ್ಯಕ್ತಿಗಳನ್ನು ಹೊರತುಪಡಿಸಿ ನಮ್ಮ ಇಲಾಖಾ ಜೀಪ್ ನಲ್ಲಿ ಬೇರೆ ಯಾರನ್ನು ಸಹ ನಾನು ಕರೆದುಕೊಂಡು ಹೋಗಿಲ್ಲ. ದಾಳಿ ಮಾಡಿದ ಸ್ಥಳದಲ್ಲಿ ನಾನು ಮೇಲೆ ತಿಳಿಸಿದ ನಮ್ಮ ಸಿಬ್ಬಂದಿಗಳನ್ನು ಹೊರತು ಪಡಿಸಿ ಬೇರೆ ಯಾವ ನಮ್ಮ ಸಿಬ್ಬಂದಿಯೂ ಇರಲಿಲ್ಲ.

ಆರೋಪಿ ಮಂಡ್ಯ ಕೊಪ್ಪಲು ಗ್ರಾಮದಲ್ಲಿ ಸಣ್ಣ ಅಂಗಡಿ ಇಟ್ಟುಕೊಂಡು ಟೀ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಟೀ ವ್ಯಾಪಾರದ ಜೊತೆಗೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಈ ಮೊಕದ್ದಮೆಗೂ ಮೊದಲು ಆರೋಪಿಯ ವಿರುದ್ಧ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಬಗ್ಗೆ ಯಾವುದೇ ಪ್ರಕರಣ ನಮ್ಮ ಠಾಣೆಯಲ್ಲಿ ದಾಖಲಾಗಿರಲಿಲ್ಲ ಎಂದರೆ ಸರಿ.

ಆರೋಪಿ ವ್ಯಾಪಾರ ಮಾಡುವ ಟೀ ಅಂಗಡಿಯ ಮುಂದೆ ಮುಖ್ಯರಸ್ತೆ ಇದೆ ಎಂದರೆ ಸರಿ. ಸದರಿ ಜಾಗದಲ್ಲಿ ರಸ್ತೆಯಲ್ಲಿ ಓಡಾಡುವ ವ್ಯಕ್ತಿಗಳು ಬೈಕ್ ನಿಲ್ಲಿಸಿ ಟೀ ಕುಡಿಯುತ್ತಾರೆ ಎಂದರೆ ಸರಿ. ನಾನು ಆರೋಪಿ ಮದ್ಯ ಮಾರಾಟ ಮಾಡುವುದನ್ನು ಪ್ರತ್ಯಕ್ಷ ನೋಡಿಲ್ಲ ಎಂದರೆ ಸರಿ. ಪಂಚರಿಗೆ ನಾನು ದಾಳಿ ಸಮಯದಲ್ಲಿ ಹಾಜರಿರುವಂತೆ ಲಿಖಿತ ನೋಟೀಸ್ ನೀಡಿಲ್ಲ. ದಾಳಿಯ ಕಾಲದಲ್ಲಿ ಆರೋಪಿಯ ಟೀ ಅಂಗಡಿ ಒಳಗೆ ಮದ್ಯ ತುಂಬಿದ ಪೌಚ್ ಗಳು ಸಿಕ್ಕಿರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ಮದ್ಯ ಸೇವಿಸಿ ಬಿಸಾಡಿದ್ದ ಖಾಲಿ ಪೌಚ್ ಗಳು ಸಿಕ್ಕಿಲ್ಲ ಎಂದರೆ ಸರಿ.

ಪಂಚರ ಸಮಕ್ಷಮ ಮದ್ಯ ತುಂಬಿದ ಪೌಚ್ ಗಳನ್ನು ದಾಳಿಯ ಸಮಯದಲ್ಲಿ ನಾನು ವಶಪಡಿಸಿಕೊಂಡಿದ್ದೇನೆ. ದಾಳಿ ಕಾರ್ಯದ ಸಂಬಂಧ ನಾನು ಯಾವುದೇ ವಿಡಿಯೋ ಚಿತ್ರೀಕರಣ ಮಾಡಿಸಿಲ್ಲ. ಹಲವಾರು ಪ್ರಕರಣಗಳಲ್ಲಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡು

ಠಾಣೆಯಲ್ಲಿಟ್ಟಿರುತ್ತೇವೆ ಎಂದರೆ ಸರಿ. ಬೇರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮದ್ಯದ ಪೌಚ್ ಗಳನ್ನು ಆರೋಪಿಯ ಅಂಗಡಿ ಹತ್ತಿರ ಸಿಕ್ಕಿದೆ ಎಂದು ಸುಳ್ಳು ಮೊಕದ್ದಮೆಯನ್ನು ಆರೋಪಿಯ ವಿರುದ್ದ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಅಮಾನತ್ತು ಪಡಿಸಿಕೊಳ್ಳುವ ವೇಳೆ ಬರೆದ ಮಹಜರ್ ನಲ್ಲಿ ಸಿಕ್ಕ ಮದ್ಯ ತುಂಬಿದ ಪೌಚ್ ಗಳ ಬ್ಯಾಚ್ ನಂಬರ್ ಮತ್ತು ತಯಾರಿಸಿದ ದಿನಾಂಕದ ಬಗ್ಗೆ ನಮೂದಿಸಿಲ್ಲ. ಸದರಿ ವಿಚಾರವನ್ನು ಮಹಜರ್ ನಲ್ಲಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

ಮು.ಮಾಲು.1 ರಿಂದ 3 ಆರೋಪಿಯ ಅಂಗಡಿಗೆ ಹೊಂದಿಕೊಂಡಂತೆ ಇರುವ ಪಶ್ಚಿಮ ದಿಕ್ಕಿನಲ್ಲಿ ಸಿಕ್ಕಿರುತ್ತದೆ. ಆರೋಪಿ ಮದ್ಯದ ಪೌಚ್ ಗಳನ್ನು ಎಲ್ಲಿಂದ ತಂದಿದ್ದರು ಎನ್ನುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ.

ನಮ್ಮ ಠಾಣೆಯಲ್ಲಿನ ಮೊಕದ್ದಮೆಗಳ ಅಂಕಿ ಅಂಶಗಳನ್ನು ಹೆಚ್ಚಿಸಿ ಅದರಿಂದ ನಮ್ಮ ಮೇಲಾಧಿಕಾರಿಯವರ ಪ್ರಶಂಸೆ ಗಳಿಸುವ ಸಲುವಾಗಿ ಆರೋಪಿತನ ವಿರುದ್ದ ಸುಳ್ಳು ಪಿರ್ಯಾದು ನೀಡಿ ಸುಳ್ಳು ಕೇಸು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ.2 ಮಹಜರ್ ಅನ್ನು ನಮ್ಮ ಠಾಣೆಯಲ್ಲಿಯೇ ತಯಾರಿಸಲಾಗಿದೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.